## ಚಾರಿತ್ರ್ಯದ ವ್ಯಾಪಕತೆ

ಛಾಂದೋಗ್ಯ ಉಪನಿಷತ್ತಿನಲ್ಲಿ ಭಗವತ್ತತ್ತ್ವವನ್ನು 'ಭೂಮಾ' ಎಂದು ಹೆಸರಿಸಿದೆ. ವ್ಯಾಪಕ ದೃಷ್ಟಿಯಲ್ಲಿ ಇದರ ಅರ್ಥ, 'ಮಹಾನ್' ಎಂದು. ನಾವು ಭಗವಂತನನ್ನು ನಮ್ಮ ಸಂಕೀರ್ಣ ಧರ್ಮ, ಸಂಪ್ರದಾಯಗಳು ಹಾಗೂ ಮನಸ್ಸಿನ ಆಧಾರದ ಮೇಲೆ ಸೀಮಿತಗೊಳಿಸಬಾರದು. ಭಗವಂತನು ಮಹಾನ್ ಅಂದರೆ ಅನಂತನಾಗಿದ್ದಾನೆ. ಅವನ ಅನಂತತೆಯಲ್ಲಿ ಎಲ್ಲವೂ ಸಂಮಿಲಿತವಾಗಿದೆ. ಆದರೆ ಭಗವಂತನು ಅನಂತನೆಂದು ಹೇಳುವ ಮರುಕ್ಷಣದಲ್ಲಿಯೇ, ಅವನನ್ನು ಕ್ರೈಸ್ತರವನು, ಮುಸಲ್ಮಾನನು ಅಥವಾ ಹಿಂದೂ ಎಂದು ನಮ್ಮ ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತೇವೆ. ಭಗವಂತನು ಮಹಾನ್ – ಅನಂತ ಎಂದರೆ ಅವನು ಎಲ್ಲ ವಸ್ತುಗಳಿಗಿಂತ ಅನಂತನಾದವನು ಎಂದರ್ಥ. ಅವನು ಸಮುದ್ರಕ್ಕಿಂತ ಮಹಾನ್, ಆಕಾಶಕ್ಕಿಂತ ಮಹಾನ್, ಮನಸ್ಸಿಗಿಂತ ಮಹಾನ್, ಜೀವನಕ್ಕಿಂತ ಶ್ರೇಷ್ಠನಾದವನು, ಮೃತ್ಯುವಿಗಿಂತ ಅತೀತನು, ನಮಗೆ ಗೊತ್ತಿರುವ ಎಲ್ಲ ವಸ್ತುಗಳಿಗಿಂತಲೂ ಹಿರಿದಾದವನು.

ಭಗವಂತನು ಮಾನವ ಇತಿಹಾಸವನ್ನು ಮಾತ್ರವೇ ಪ್ರವರ್ತಿಸಿರುವನೆಂದು ನಾವು ಹೇಳಲಾಗುವುದಿಲ್ಲ; ಕೇವಲ ಒಂದು ವಿಶೇಷ ಸಮುದಾಯವನ್ನು ಮಾತ್ರವೇ ಅವನು ಉದ್ಧಾರ ಮಾಡುವನೆಂದು ಕೂಡ ಹೇಳಲಾಗುವುದಿಲ್ಲ. ಕಾಲದಲ್ಲಿ ಅಂತರ್ಗತವಾಗುವ ಸಮಸ್ತ ಘಟನೆಗಳು ಹಾಗೂ ಐತಿಹಾಸಿಕ ವಿಶಿಷ್ಟತೆಗಳಿಗೆ ಭಗವಂತನೇ ಜವಾಬ್ದಾರ ಎನ್ನುವುದೇನೋ ನಿಜ. ಆದರೆ ಅಷ್ಟರಲ್ಲಿಯೇ ಅವನ ಮಹಾತ್ಮೆ ಕೊನೆಗೊಳ್ಳುವುದಿಲ್ಲ. ಅವನು ಅವಿನಾಶಿ. ಅವನು ಕಾಲಕ್ಕಿಂತ, ಇತಿಹಾಸಕ್ಕಿಂತ, ನಮ್ಮ ಮತಸಂಪ್ರದಾಯಗಳಿಗಿಂತ ಮತ್ತು ಎಲ್ಲ ಧರ್ಮಗ್ರಂಥಗಳಿಗಿಂತ ಶ್ರೇಷ್ಠನಾದವನು. ಭಗವಂತನನ್ನು ಈ ರೀತಿಯಾಗಿ ಚಿಂತಿಸಿದರೆ ಮಾತ್ರ ನಮ್ಮ ವ್ಯಕ್ತಿತ್ವದಲ್ಲಿ ಚಾರಿತ್ರ್ಯವು ತನ್ನ ಯಥಾರ್ಥ ಭವ್ಯತೆಯ ರೂಪದಲ್ಲಿ ಅರಳಿ ನಿಲ್ಲುತ್ತದೆ.

ಕೆಲವರ್ಷಗಳ ಮಟ್ಟಿಗೆ ನಾವು ಧಾರ್ಮಿಕ ಜೀವನವನ್ನು ನಡೆಸಲು ಪ್ರಯತ್ನಿಸುತ್ತೇವೆ. ಆದರೆ ಅದು ನಮ್ಮ ಆಧ್ಯಾತ್ಮಿಕ ದೃಷ್ಟಿಕೋನವನ್ನು ಉದಾರ ದೃಷ್ಟಿಯನ್ನಾಗಿ ಮಾಡುವುದಿಲ್ಲ. ಇದಕ್ಕೆ ಕಾರಣ ಭಗವಂತನ ಬಗೆಗಿನ ನಮ್ಮ ಧೋರಣೆ ಸಂಕುಚಿತ ಮತ್ತು ಸಾಂಪ್ರದಾಯಿಕವಾಗಿರುತ್ತದೆ. ಇದರಿಂದ ನಮ್ಮ ನಡತೆಯಲ್ಲಿ ಯಾವ ಪರಿವರ್ತನೆಯೂ ಆಗುವುದಿಲ್ಲ. ನಾವು ಹೇಗೆ ಸೀಮಿತ ಮನುಷ್ಯರಾಗಿ ಹುಟ್ಟಿರುತ್ತೇವೆಯೋ, ಹಾಗೆಯೇ ಜೀವನಪರ್ಯಂತ ಇದ್ದುಬಿಡುತ್ತೇವೆ. ನಾವು ಧಾರ್ಮಿಕರೆಂದು ಹೇಳಿಕೊಳ್ಳುತ್ತೇವೆ, ಆದರೆ ನಮ್ಮ ಹೃದಯ ವಿಕಾಸವಾಗಿರುವುದಿಲ್ಲ. ಆದ್ದರಿಂದ ನಾವು ಮಾಡಬೇಕಾದುದು ಏನೆಂದರೆ ಅನಂತರೂಪನಾದ ಮಹಾನ್‌ಸ್ವರೂಪಿಯಾದ ಭಗವಂತನ ಚಿಂತನೆ. ಆ ಮೂಲಕ ಅವನ ಮಹಾತ್ಮೆಯಲ್ಲಿ ನಾವೂ ಪಾಲುಗಾರರಾಗಬೇಕು. ಮಹಾತ್ಮೆ ಅಥವಾ ಅನಂತದ ಅರ್ಥವೇನು ಗೊತ್ತೆ? ಆಧ್ಯಾತ್ಮಿಕ ಪರಿಪೂರ್ಣತೆ; ಅಜ್ಞಾನ, ಸಂಕುಚಿತತೆ, ಮತಾಂಧತೆ ಮತ್ತು ದ್ವೇಷಗಳಿಂದ ಸಂಪೂರ್ಣ ಮುಕ್ತಿ; ರಾಗ ಮತ್ತು ಪಕ್ಷಪಾತ ಭಾವನೆಗಳಿಂದ ಬಿಡುಗಡೆ.

> **"ಹೇ ಪ್ರಭು, ನೀನು ನನ್ನನ್ನು ಶಾಂತಿಯ ಒಂದು ಯಂತ್ರವನ್ನಾಗಿ ಮಾಡು; ಎಲ್ಲಿ ತಿರಸ್ಕಾರ ಮೂಡುವುದೋ ಅಲ್ಲಿ ಪ್ರೇಮವನ್ನು ನೀಡುವಂತೆ ಮಾಡು; ಎಲ್ಲಿ ಆಘಾತಗಳು ಬೀಳುತ್ತವೆಯೋ ಅಲ್ಲಿ ಕ್ಷಮೆ, ಎಲ್ಲಿ ಸಂಶಯವಿದೆಯೋ ಅಲ್ಲಿ ವಿಶ್ವಾಸ, ಎಲ್ಲಿ ನಿರಾಶೆಯಿದೆಯೋ ಅಲ್ಲಿ ಆಸೆ, ಎಲ್ಲಿ ಕತ್ತಲಿದೆಯೋ ಅಲ್ಲಿ ಬೆಳಕು ಮತ್ತು ಎಲ್ಲಿ ಉದಾಸೀನತೆ ಇದೆಯೋ ಅಲ್ಲಿ ಪ್ರಸನ್ನತೆ ಉಂಟಾಗುವಂತೆ ಮಾಡು."**
>
> **–ಸಂತ ಫ್ರಾನ್ಸಿಸ್**

ನಮ್ಮ ಚಾರಿತ್ರ್ಯವನ್ನು ಉದಾರವನ್ನಾಗಿ ಮಾಡಿಕೊಳ್ಳಲು ಇದೇ ಸಾಧನಾಮಾರ್ಗವಾಗಿದೆ. ನಮ್ಮಲ್ಲಿ ಧೈರ್ಯ ಮತ್ತು ಸತತ ಪ್ರಯತ್ನಗಳಿದ್ದಲ್ಲಿ ನಿಶ್ಚಯವಾಗಿ ನಾವು ಈ ಸಾಧನೆಯಲ್ಲಿ ಸಿದ್ಧಿಯನ್ನು ಪಡೆಯಬಹುದು. ಈ ಸಿದ್ಧಿಯ ಸ್ವರೂಪವೇನು? ಅಂಥ ಸಿದ್ಧಿಯ ಸ್ಥಿತಿ ನಮಗೆ ದೊರೆತಲ್ಲಿ ಸಂತ ಫ್ರಾನ್ಸಿಸ್‌ನ ಜೊತೆಗೂಡಿ ನಾವೂ ಪ್ರಾರ್ಥಿಸಬಲ್ಲೆವು (ಬಾಕ್ಸ್ ನೋಡಿ). ತನ್ನ ಚಾರಿತ್ರ್ಯವನ್ನು ನಿರ್ಮಾಣ ಮಾಡಿಕೊಂಡ ವ್ಯಕ್ತಿಯು ತನ್ನ ಸುತ್ತಲೂ ಅದೆಷ್ಟು ಶಾಂತಿ, ಆನಂದ, ಬಲ, ಪ್ರೇಮ ಮತ್ತು ವಿಶ್ವಾಸಗಳನ್ನು ಹರಡುತ್ತಾನೆ ಎನ್ನುವುದನ್ನು ವಿಚಾರ ಮಾಡಿನೋಡಿ. ಇದೇ ನಿಜವಾದ ಸಮಾಜಸೇವೆ ಆಗಲಾರದೇನು!

ಪ್ರತಿಯೊಬ್ಬ ಮನುಷ್ಯ ಕೂಡ ನಿಸ್ವಾರ್ಥ ಪ್ರೇಮ ಮತ್ತು ಪವಿತ್ರತೆಯನ್ನು ಬಯಸುತ್ತಾನೆ; ಶಾಂತಿ ಮತ್ತು ಸಹಾನುಭೂತಿ ಗಳಿಗಾಗಿ ಹಾತೊರೆಯುತ್ತಾನೆ. ಇವುಗಳನ್ನು ಕೇವಲ ವಿಜ್ಞಾನ ಅಥವಾ ತಂತ್ರಜ್ಞಾನಗಳ ಯಶಸ್ಸಿನಿಂದ ಪಡೆಯಲಾಗುವುದಿಲ್ಲ; ಅವು ರಾಜಕೀಯ ನೀತಿಗಳಿಂದ ಅಥವಾ ಸಂಧಿ ಒಪ್ಪಂದಗಳಿಂದ ಗಳಿಸುವಂಥವುಗಳಲ್ಲ. ಉದಾರಚರಿತರಾದ ಶ್ರೇಷ್ಠ ಮಹಾಪುರುಷರ ಸಾನ್ನಿಧ್ಯವು ಎಂದು ಸಮಾಜಕ್ಕೆ ದೊರಕುವುದೋ ಅಂದು ಆ ಮೌಲ್ಯಗಳು ಸಮಾಜದಲ್ಲಿ ಹರಡುತ್ತವೆ. ಅಂತಹ ಮಹಾಪುರುಷರ ಶೀಲವು ನಿರ್ಮಲವಾಗಿರುತ್ತದೆ ಹಾಗೂ ಅವರ ನಡೆನುಡಿಗಳಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ವಿದ್ವಾಂಸರು ಮತ್ತು ರಾಜನೀತಿಜ್ಞರಿಗಿಂತಲೂ ಹೆಚ್ಚಾಗಿ ಇಂಥ ಪವಿತ್ರಚಾರಿತ್ರ್ಯದ ಸ್ತ್ರೀ–ಪುರುಷರು ಇಂದು ಸಮಾಜಕ್ಕೆ ಅತ್ಯಧಿಕ ಸಂಖ್ಯೆಯಲ್ಲಿ ಬೇಕಾಗಿದ್ದಾರೆ.

ಹೀಗಾಗಿ ನಮ್ಮ ನಡತೆಯನ್ನು ವಿಕಾಸಮಾಡಿಕೊಳ್ಳುವ ಸಾಧನೆ ಯಲ್ಲಿ, ತುಂಬು ಬಯಕೆ, ಉತ್ಸಾಹ ಮತ್ತು ಧೈರ್ಯಗಳಿಂದ ಕಾರ್ಯತತ್ಪರರಾಗಬೇಕು. ಇದರ ಸಫಲತೆಯಿಂದ ನಮಗೊಬ್ಬರಿಗೆ ಮಾತ್ರವೇ ಒಳ್ಳೆಯದಾಗುವುದಿಲ್ಲ, ನಮ್ಮ ನೆರೆಹೊರೆಯ ಜನರಿಗೆ, ಮಿತ್ರರಿಗೆ, ಒಡನಾಡಿಗಳಿಗೆ ಮತ್ತು ಒಟ್ಟಾರೆ ಸಮಾಜಕ್ಕೆ ಇದೊಂದು ವರದಾನವಾಗುವುದು. ಉದಾರಚಾರಿತ್ರ್ಯವೆಂಬುದು ಅಷ್ಟೊಂದು ಮಹತ್ವದ್ದು. ನಾವು ಅದನ್ನು ಹೀಗೆಯೇ ಎಂದು ವ್ಯಾಖ್ಯಾನ ಮಾಡಲಾರೆವು. ಆದರೆ ಅದನ್ನು ಸಹಜವಾಗಿಯೇ ನಾವು ಭಾವಿಸಿಕೊಳ್ಳಬಲ್ಲೆವು ಮತ್ತು ಪ್ರಯತ್ನ ಮಾಡಿದರೆ, ನಮ್ಮ ಜೀವನದಲ್ಲಿಯೂ, ಅದನ್ನು ಅಳವಡಿಸಿಕೊಳ್ಳಲು ಶಕ್ತರಾಗುವೆವು. ಇಂತಹ ಮಹಾನ್ ವ್ಯಕ್ತಿಗಳೇ, **ವಸುಧೈವ ಕುಟುಂಬಕಮ್** (ಇಡೀ ಭೂಮಿಯೇ ಒಂದು ಕುಟುಂಬ) ಎಂಬ ಧ್ಯೇಯವಾಕ್ಯದ ಆಧಾರಸ್ತಂಭಗಳಾಗಿ ನಿಲ್ಲುತ್ತಾರೆ. ★